ಆ) ಮಿನಿ ವಿಧಾನಸೌಧ ನಿರ್ಮಾಣಕ್ಕಾಗಿ ಜಮೀನು ಗುರುತಿಸಲಾಗಿದೆಯೇ, (ವಿವರ ನೀಡುವುದು),

ಇ) ಈ ಕಟ್ಟಡ ಕಾಮಗಾರಿಗೆ ನಿಗದಿಪಡಿಸಿದ ಅನುದಾನದ ಮೊತ್ತ ಹಾಗೂ ನಿಗದಿಪಡಿಸಿರುವ ಕಾಲಮಿತಿ ಏನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಮಿನಿ ವಿಧಾನಸೌಧದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಹೌದು ಬೆಳ್ತಂಗಡಿ ತಾಲ್ಲೂಕು ಸರ್ವೆ ನಂ 91/1 ಎ2 ಎ1 ಎರಲ್ಲಿ 2 66 ಎಕರೆ ಜಮೀನನ್ನು ಈ ಕಾಮಗಾರಿಗೆ ಗುರುತಿಸಲಾಗಿದೆ

ಇ) ಸಂಪನ್ಮೂಲಗಳ ವ್ಯವಸ್ಥೆ ಆಗುತ್ತಲೆ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಕ್ರಮ ಜರುಗಿಸಲಾಗುವುದು

823 (579) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಮಂಜೂರು ಮಾಡಿದ ಹಾಗೂ ಮಾಡಬೇಕಾಗಿರುವ ಪ್ರಕರಣಗಳು ಎಷ್ಟು, (ಪ್ರಕರಣವಾರು ಮತ್ತು ವರ್ಷವಾರು ಮಾಹಿತಿ ನೀಡುವುದು),

ಆ) ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಮಂಜೂರಾತಿ ನೀಡಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 1969 ರಿಂದ 2000ದ ವರೆಗೆ ಸಾರ್ವಜನಿಕ ಉದ್ದೇಶಕ್ಕೆ ಮಂಜೂರಾತಿ ಮಾಡಿದ ಮತ್ತು ಭೂಮಿ ಕಾದಿರಿಸಿದ ಪ್ರಕರಣಗಳು ಒಟ್ಟು 810

2003 ರಿಂದ 2006ರ ವರೆಗೆ ಸಾರ್ವಜನಿಕ ಉದ್ದೇಶಕ್ಕೆ ಭೂ ಮಂಜೂರಾತಿ ಮಾಡಲು ಬಾಕಿಯಿರುವ ಪ್ರಕರಣಗಳ ಸಂಖ್ಯೆ 59

ಆ) 1964ರ ಕರ್ನಾಟಕ ಲ್ಯಾಂಡ್ ರೆವೆನ್ಯೂ ಆಕ್ಟ್ ಸೆಕ್ಷನ್ 71ರಂತೆ ಸಾರ್ವಜನಿಕ ಉದ್ದೇಶಕ್ಕೆ ಅರ್ಹ ಪ್ರಕರಣಗಳಲ್ಲಿ ಸ್ಥಳ ಕಾದಿರಿಸುತ್ತದೆ ಮತ್ತು 1969ನೇ ಕರ್ನಾಟಕ ಭೂ ಮಂಜೂರಾತಿ ನಿಯಮಗಳಡಿ ಅರ್ಹ ಪ್ರಕರಣಗಳಲ್ಲಿ ಜಮೀನು ಲಭ್ಯತೆ ಹಾಗೂ ಅರ್ಹತೆಗೆ ಅನುಗುಣವಾಗಿ ಭೂ ಮಂಜೂರಾತಿ ಮಾಡಲಾಗುತ್ತಿದೆ

VKS 08
ಬಿಜೆ.